# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ 07 ಬ್ಯಾಟರಾಯನಪುರ ವಾರ್ಡ್ ಸಮಿತಿ ಸಭೆಯ ನಡವಳಿ.

ದಿನಾಂಕ 21.08.2021 ರಂದು ವಾರ್ಡ್ ಕಛೇರಿಯಲ್ಲಿ ಬೆಳ್ಳಿಗೆ 11.00 ಕ್ಕೆ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ನಂ.07, ಬ್ಯಾಟರಾಯನಪುರ ವಾರ್ಡ್‌ಗೆ ಮಾನ್ಯ ಆಯುಕ್ತರ ಆದೇಶದಂತೆ ನೋಡಲ್ ಅಧಿಕಾರಿಯಾಗಿ ನಿಯೋಜಿಸಲಾಗಿರುವ ಶ್ರೀ.ಪ್ರಕಾಶ್.ಜಿ ರವರು ಸಭೆಯಲ್ಲಿ ಹಾಜರಿದ್ದು, ಈ ಹಿಂದಿನ ಸಭೆಯ ನಡುವಳಿಗಳ ಬಗ್ಗೆ ಗಮನ ಹರಿಸಿ, ಕೈಗೊಂಡ ಕ್ರಮದ ಬಗ್ಗೆ ಚರ್ಚಿಸಲಾಯಿತು.

1. **ಘನತ್ಯಾಜ್ಯ ನಿರ್ವಹಣೆ:**
   1. ವಾರ್ಡ್ ವ್ಯಾಪ್ತಿಯ ರಸ್ತೆಯ ಬದಿಗಳಲ್ಲಿ ಕಸದ ರಾಶಿ ಕಾಣುತ್ತಿದ್ದು, ಸದರಿ ಗುತ್ತಿಗೆದಾರರು ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿರುತ್ತಾರೆ. ಇದಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ) ರವರು ಮುಂದಿನ ಸಭೆಯಲ್ಲಿ ಸಮಜಾಯಷಿ ನೀಡಬೇಕೆಂದು ಸಮಿತಿ ಸದಸ್ಯರು ಮನವಿ ಮಾಡಿರುತ್ತಾರೆ.
   2. ಘನತ್ಯಾಜ್ಯ ನಿರ್ವಹಣೆ ವಿಭಾಗದ ಮೇಲಾಧೀಕಾರಿಗಳು ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಬೇಕೆಂದು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಮನವಿ ಮಾಡಿರುತ್ತಾರೆ.
   3. ಘಣತ್ಯಾಜ್ಯಾ ನಿರ್ವಹಣೆಗೆ ಸಂಂಬಂದಿಸಿದಂತೆ, ವಾರ್ಡ್ 07 ರಲ್ಲಿ ಕಾರ್ಯನಿರ್ವಹಿಸುತ್ತಿರುವ 2 ಕಾಂಪ್ಯಾಕ್ಟರ್ ವಾಹನಗಳು ದಿನನಿತ್ಯ, ರಸ್ತೆ ಬದಿಯಲ್ಲಿರುವ ಕಸವನ್ನು ತೆರವು ಮಾಡಿ, ಭಾವಚಿತ್ರಗಳನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾಹಿತಿ ನೀಡಬೇಕೆಂದು ಸುಚಿಸಲಾಗಿರುತ್ತೆ.
   4. ವಾರ್ಡ್ ಕಛೇರಿಯ ಆವರಣದಲ್ಲಿ, ನಿಲ್ಲಿಸಲಾಗಿರುವ ಪಾಲಿಕೆ ಕಾಂಪ್ಯಾಕ್ಟರ್ ಮತ್ತು ಟ್ರಾಕ್ಟರ್ ವಾಹನವನ್ನು ಕೂಡಲೇ ದುರಸ್ಥಿಗೊಳಿಸಬೇಕೆಂದು ಸೂಚಿಸಲಾಯಿತು.
2. **ಆರೋಗ್ಯ ಇಲಾಖೆ:**
   1. ಕೋವಿಡ್ 3ನೇ ಅಲೆ ಹರಡುವ ಸಾದ್ಯತೆಯಿದ್ದು, ಕೋವಿಡ್ ಸೋಂಕಿನ ಬಗ್ಗೆ ಎಚ್ಚರವಹಿಸಲು ಅಧಿಕಾರಿಗಳು ಸಮಿತಿ ಸದಸ್ಯರಿಗೆ ಮನದಟ್ಟು ಮಾಡಿರುತ್ತಾರೆ.
   2. ವಸತಿ ಸಮುಚ್ಚಯಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪರಿಶೀಲಿಸಲು ನಿಯಮಿತ ತಪಾಸಣೆಯನ್ನು ಕೈಗೊಳ್ಳುವುದು.
   3. ಅಂಗಡಿಗಳ ಮಾಲೀಕರು ವ್ಯಾಪಾರ ಪರವಾನಿಗೆಯನ್ನು ಪಡೆಯದೇ ವ್ಯಾಪಾರ ಮಾಡುತ್ತಿರುವುವರ ವಿರುದ್ದ ಕ್ರಮಕೈಗೊಳ್ಳುವುದು.

4. ಪ್ಲಾಸ್ಟಿಕ್ ಬಳಕೆ ನಿಷೇದದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮುಡಿಸಿ ಮತ್ತು ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬಳಕೆ ಕಂಡುಬಂದಲ್ಲಿ ಪ್ಲಾಸ್ಟಿಕ್ ಸೀಜ್ ಮಾಡುವ ಕೆಲಸವನ್ನು ವ್ಯಾಪಕವಾಗಿ ನಿರ್ವಹಿಸುವುದು.

3. ಕಾಮಗಾರಿ ವಿಭಾಗ:

1. 2021-22 ನೇ ಸಾಲಿನ ಅನುದಾನದಲ್ಲಿ ಕಾಯ್ದಿರಿಸಲಾಗಿರುವ POW ಮತ್ತು ವಿವಿಧ ಪಿಕೋಡ್ ರಡಿಯಲ್ಲಿ ಪರಿಗಣಿಸಬೇಕಾದ ಕಾಮಗಾರಿಗಳ ಬಗ್ಗೆ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಗಿರುತ್ತದೆ. ಅದರಂತೆ ವಾರ್ಡ್ ಕಾರ್ಯಕ್ರಮಗಳ ಪಟ್ಟಿಗೆ ಅನುಮೋದನೆಯನ್ನು ಪಡೆಯಲು ಕಡತವನ್ನು ಅನುಮೋದನೆಗಾಗಿ ಕಡತವನ್ನು ಸಲ್ಲಿಸಲಾಗಿರುತ್ತದೆ.

4. ವಿದ್ಯುತ್ (ಬೀದಿ ದೀಪಗಳ ನಿರ್ವಹಣೆ) ವಿಭಾಗ:

1. ಬೀದಿ ದೀಪಗಳ ನಿರ್ವಹಣೆ ಅತ್ಯಂತ ಪ್ರಮುಖವಾದ ಕೆಲಸವಾಗಿದ್ದು. ಬೀದಿ ದೀಪಗಳನ್ನು ಅದಷ್ಟು ಸುಸ್ಥಿತಿಯಲ್ಲಿಡುವುದು.
2. ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಲಾಗಿರುವ ಎಲ್.ಇ.ಡಿ ವಿದ್ಯುತ್ ದೀಪಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಕ್ರಮವಹಿಸುವುದು.

5. ಕಂದಾಯ ವಿಭಾಗ:

1. ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಪಾವತಿಯನ್ನು ಬಾಕಿ ಉಳಿಸಿಕೊಂಡಿರುವ ಪ್ರಮುಖ ಸಂಸ್ಥೆಗಳನ್ನು ಗುರುತಿಸಿ ಇವುರುಗಳಿಂದ ಕಂದಾಯವನ್ನು ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಲುವುದು.
2. ಮುಂದಿನ ಸಭೆಗೆ, ವಾರ್ಡ್ ವ್ಯಾಪ್ತಿಯಲ್ಲಿ, DWCC AND Bio methanisationplant ಘಟಕವನ್ನು ನಿರ್ಮಿಸಲು, ವಾರ್ಡ್‌ನಲ್ಲಿ ಲಭ್ಯವಿರುವ ಸರ್ಕಾರಿ ಜಾಗವನ್ನು ಗುರುತಿಸಕೊಡಬೇಕೆಂದು ಸಭೆಯಲ್ಲಿ ಹಾಜರಿದ್ದ, ಕಂದಾಯ ಇಳಾಖೆಯ ಅಧಿಕಾರಿಗಳಿಗೆ ನೋಡೆಲ್ ಅಧಿಕಾರಿಯವರು ಸೂಚಿಸಿದರು.

6. ಜಲಮಂಡಳಿ ವಿಭಾಗ:

1. ರಸ್ತೆ ಡಾಂಬರೀಕರಣ ಮುಗಿದ ನಂತರ ಸ್ಯಾನಿಟರಿ ಚೇಂಬರ್‌ಗಳ ಮಟ್ಟವನ್ನು ರಸ್ತೆ ಮಟ್ಟಕ್ಕೆ ಸರಿಪಡಿಸುವುದು.
2. ಮರಿಯಣ್ಣಪಾಳ್ಯದ ಹೀರಾ ಕೆಟರ್ಸ್ ರಸ್ತೆಯಲ್ಲಿ ನಿರ್ವಹಿಸಿರುವ ಒಳಚರಂಡಿ ಕಾಮಗಾರಿಯ ಇಳಿಜಾರು ಸರಿಯಿಲ್ಲದೆ ಇದ್ದು, ಇದನ್ನು ಕೂಡಲೇ ಪರಿಶಿಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿರುತ್ತಾರೆ.
3. ತಮ್ಮ ಇಲಾಖೆ ವತಿಯಿಂದ ರಸ್ತೆ ಅಗೆದರೆ ಅದನ್ನು ನಿಯಾಮಾನುಸಾರ ಸರಿಪಡಿಸುವುದು.

7. **ತೋಟಗಾರಿಕೆ:**

1. ಉದ್ಯಾನವನ ಗಳ ನಿರ್ವಹಣೆಯ ಗುತ್ತಿಗೆದಾರರಿಗೆ ನಿರ್ವಹಣಾ ಬಿಲ್ ನ್ನು ಸುಮಾರು 2 ವರ್ಷಗಳಿಂದ ಪಾವತಿ ಹಾಗದೆ ಇದ್ದು, ಇದರಿಂದ ಉದ್ಯಾನವನಗಳ ನಿರ್ವಹಣೆ ಕಷ್ಟವಾಗುತ್ತಿರವುದರ ಬಗ್ಗೆ ತೋಟಗಾರಿಕೆ ಅಧೀಕ್ಷಕರು ತಿಳಿಸಿದರು.
2. ಉದ್ಯಾನವನಗಳಲ್ಲಿ ಈಗಾಗಲೇ ನಿರ್ಮಿಸಿರುವ ಸಾರ್ವಜನಿಕರ ಶೌಚಾಲಯಗಳ ನಿರ್ವಹಣೆ ಕೆಲಸದಲ್ಲಿ ಯಾರಾದರೂ ಆಸಕ್ತಿವುಳ್ಳವರು ವಾರ್ಡ್ ಕಛೇರಿಗೆ ಅರ್ಜಿ ನೀಡಬೇಕೆಂದು ಸಭೆಯಲ್ಲಿ ಹಾಜರಿದ್ದವರಿಗೆ ಮನವಿ ಮಾಡಲಾಯಿತು.

8. **ಅರಣ್ಯ ಇಲಾಖೆ:-**

1. ಅರಣ್ಯ ವಿಭಾಗದವರು ವಾರ್ಡ್ ಸಮಿತಿ ಸಭೆಗೆ ಹಾಜರಾಗಿರುವುದಲ್ಲ, ನೋಡೆಲ್ ಅಧಿಕಾರಿಯವರು ದೂರವಾಣಿ ಮೂಲಕ ಸಂಪರ್ಕಿಸಿ, ಪಂಪಾ ಬಡಾವಣೆ ಮತ್ತು ಅಮೃತನಗರ ಮಾರುತಿ ಪಾರ್ಮ್ ಹತ್ತಿರ ಪೂರ್ಣವಾಗಿ ಒಣಗಿಹೋಗಿರುವ ಮರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತೆರವುಮಾಡಬೇಕೆಂದು ಸೂಚಿಸಲಾಗಿರುತ್ತದೆ. ಸದರಿ ವಿಷಯ ಬಗ್ಗೆ ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಸೂಚಿಸಲಾಗಿದೆ.
2. ವಿನಾಯಕ ಬಡಾವಣೆ 2ನೇ ಹಂತದಲ್ಲಿ ಸುಮಾರು 20 ಗಿಡಗಳನ್ನು ಬಡಾವಣೆಗೆ ನೀಡುವಂತೆ ಮನವಿ ಮಾಡಿರುತ್ತಾರೆ.

ಕಾರ್ಯದರ್ಶಿ
ವಾರ್ಡ್ 07